## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 251/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸಿದ್ದಲಿಂಗಸ್ವಾಮಿ | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ/ಗಂಡನ ಹೆಸರು** | ಃ ಶ್ರೀ ನಂಜರಾಜು | **30.08.2024** | |
| **ವಯಸ್ಸು** | ಃ **31** **ವರ್ಷ** | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ **17** |
| **ವಾಸಸ್ಥಳ** | ಃ ಗೌಡರಹುಂಡಿ | **ಚಾ.ಸಾ.** | ಃ **22** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕೋರ್ಟ್ ಮುಂದೆ ಇರುವ *1* ಮತ್ತು *2* ನೇ ಆರೋಪಿತರು ನಮ್ಮ ಗ್ರಾಮದವರೇ ಇರುತ್ತಾರೆ. 3 ನೇ ಆರೋಪಿತರನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ ಮತ್ತು ಅವರ ಪರಿಚಯ ಇಲ್ಲ. ನಮ್ಮ ಗ್ರಾಮದ ಶಿವರಾಜಪ್ಪ ಮತ್ತು ಅವರ ಮಕ್ಕಳ ಪರಿಚಯ ಇದೆ. ಶಿವರಾಜಪ್ಪ ಇವರನ್ನು ಕೊಲೆ ಮಾಡಿದ್ದಾರೆ ಆದರೆ ಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ. ಶಿವರಾಜಪ್ಪ ಇವರು ಕಾಣೆಯಾಗಿದ್ದ ದಿನ ನಾನು ಮತ್ತು ಸ್ನೇಹಿತ ಮಹೇಶ ಅಹಲ್ಯಾ ಗ್ರಾಮಕ್ಕೆ ಹೋಗಿದ್ದೆವು ಆಗ ಟ್ರಾಕ್ಟರ್ ನಲ್ಲಿ ಶರತ್ ಕುಮಾರ್ ಮತ್ತು ಇನ್ನೊಬ್ಬ ವ್ಯಕ್ತಿ ಗೌಡರಹುಂಡಿಯಿಂದ ಅಹಲ್ಯಾ ಕಡೆಗೆ ಹೋಗಿದ್ದರು ಆದರೆ ಆ ಇನ್ನೊಬ್ಬ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ಆ ದಿನ ನಾನು ಮತ್ತು ಮಹೇಶ ಅಹಲ್ಯಾದಿಂದ ಗೌಡರಹುಂಡಿಗೆ ವಾಪಸ್ಸು ಬರುತ್ತಿರುವಾಗ ಶರತ್ ಕುಮಾರ ಒಬ್ಬರೇ ಟ್ರಾಕ್ಟರ್ ನಲ್ಲಿ ವಾಪಸ್ಸು ಬಂದಿದ್ದರು. ಆ ದಿನ ನಾನು ಟ್ರಾಕ್ಟರ್ ಬಾಡಿಗೆ ಹಣ ಪಡೆಯಲು

ಅಹಲ್ಯಾ ಗ್ರಾಮಕ್ಕೆ ಹೋಗಿದ್ದೆ. ಆ ದಿನ ಕತ್ತಲಾಗಿದ್ದರಿಂದ ಶರತ್ ಕುಮಾರ್ ಜೊತೆ ಇದ್ದ ಇನ್ನೊಬ್ಬ ವ್ಯಕ್ತಿಯನ್ನು ನೋಡಲು ಆಗಿರಲಿಲ್ಲ. ನಂತರ ನನ್ನನ್ನು ಪೋಲೀಸ್ ಠಾಣೆಗೆ ಕರೆಸಿ 1 ಮತ್ತು 3 ನೇ ಆರೋಪಿತರನ್ನು ತೋರಿಸಿಲ್ಲ. ಶರತ್ ಕುಮಾರ್ ಜೊತೆ ಟ್ರಾಕ್ಟರ್ ನಲ್ಲಿ ಹೋದ ಇನ್ನೊಬ್ಬ ವ್ಯಕ್ತಿ ಯಾರು ಎಂದು ಹೇಳಲು ಆಗುವುದಿಲ್ಲ. ಆ ದಿನ ಶರತ್ ಕುಮಾರ್ ಹೋಗಿದ್ದ ಟ್ರಾಕ್ಟರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ನಿ.ಪಿ-13 ರಿಂದ 17 ಎಂದು ಗುರುತಿಸಿರುವ ಪೊಟೋಗಳಲ್ಲಿ ಕಾಣುವ ಟ್ರಾಕ್ಟರ್ ಮತ್ತು ಟ್ರೇಲರ್ ಅವೇ ಇರುತ್ತವೆ. ಶಿವರಾಜಪ್ಪ ಹೇಗೆ ತೀರಿಕೊಂಡಿದ್ದರು ಮತ್ತು ಅವರಿಗೆ ಯಾರು ಏನು ಮಾಡಿದ್ದರು ಎಂದು ಗೊತ್ತಿಲ್ಲ. ನಂಜನಗೂಡು ನ್ಯಾಯಾಧೀಶರ ಮುಂದೆ ಸಹ ಇದೇ ರೀತಿ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿ.ಪಿ-44 ಮತ್ತು ಸಹಿಯನ್ನು ನಿ.ಪಿ-44(ಎ) ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*09.06.2021* ರಂದು ನನ್ನನ್ನು ಹುಲ್ಲಹಳ್ಳಿ ಪೋಲೀಸ್ ಠಾಣೆಗೆ ಕರೆಸಿದಾಗ ಈ ಪ್ರಕರಣದ *1* ಮತ್ತು *3* ನೇ ಆರೋಪಿತರನ್ನು ನನಗೆ ತೋರಿಸಿದ್ದರು ಮತ್ತು ಅವರೇ ದಿಃ*28.05.2021* ರಂದು ಟ್ರಾಕ್ಟರ್ ನಲ್ಲಿ ಹೊಗುತ್ತಿದ್ದ ವ್ಯಕ್ತಿಗಳು ಎಂದು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. *1* ಮತ್ತು *2* ನೇ ಆರೋಪಿತರು ಸಂಚು ಮಾಡಿ ಶಿವರಾಜಪ್ಪನನ್ನು ಕೊಲೆ ಮಾಡಿ ಆ ಟ್ರಾಕ್ಟರ್ ನಲ್ಲಿ ಹೆಣವನ್ನು *1* ಮತ್ತು *3* ನೇ ಆರೋಪಿತರು ಸಾಗಿಸಿ ನಾಲೆಗೆ

ಬಿಸಾಕಿರುತ್ತಾರೆ ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಈ ದಿನ ನಂಜನಗೂಡು --------- ಗುರುತಿಸುತ್ತೇನೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*45* ಎಂದು ಗುರುತಿಸಿದೆ. ನಂಜನಗೂಡು ನ್ಯಾಯಾಧೀಶರ ಮುಂದೆ ನಿ.ಪಿ-*44* ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಗ್ರಾಮದವರೇ ಇರುವ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-

*3.* ಅಹಲ್ಯಾ ಗ್ರಾಮದಲ್ಲಿ ಯಾರ ಹತ್ತಿರ ಹಣ ಪಡೆದುಕೊಳ್ಳಲು ಹೋಗಿದ್ದ ಎಂದು ಮಹೇಶ ನನಗೆ ಹೆಸರು ಹೇಳಿಲ್ಲ. ನಾನು ಮಹೇಶನೊಂದಿಗೆ ಆಗಾಗ ಓಡಾಡುತ್ತೇನೆ. ನಾವು ನಿಂತಿದ್ದ ಹೋಟೆಲ್ ನಿಂದ ಅಹಲ್ಯಾ ಗ್ರಾಮ *150* ಮೀ ಇದೆ. ಆ ಹೋಟೆಲ್ ಸುತ್ತ ಮನೆಗಳಿವೆ. ನಾವು ಹೋಗಿದ್ದ ಮನೆ ಆ ಹೋಟೆಲ್ ನಿಂದ *200* ಮೀ ದೂರವಿದೆ. ಹೋಟೆಲ್ ಮುಂದಗಡೆ ರಸ್ತೆಯಲ್ಲಿ ಕತ್ತಲಿತ್ತು ಎಂದರೆ ನಿಜ. ಆ ಕಾಲಕ್ಕೆ ರಸ್ತೆಯಲ್ಲಿ ಯಾರು ಹೊಗುತ್ತಾರೆ ಎಂದು ಕಾಣುತ್ತಿರಲಿಲ್ಲ ಎಂದರೆ ನಿಜ. ಆ ದಿನ ರಾತ್ರಿ *8.15-8.30* ಕ್ಕೆ ನಾನು ವಾಪಸ್ಸು ಊರಿಗೆ ಹೋಗಿದ್ದೆ. ಶರತ್ ಕುಮಾರ್ ಟ್ರಾಕ್ಟರ್ ನಲ್ಲಿ ಹೋಗಿದ್ದನ್ನು ನೋಡಿದ್ದೆ ಎಂದು ನಮ್ಮ ಗ್ರಾಮದಲ್ಲಿ ವೃಷಬೇಂದ್ರ, ಸಂಜು ಮತ್ತು ಇತರರಿಗೆ ತಿಳಿಸಿದ್ದೆ. ಆ ದಿನ *1* ನೇ ಆರೋಪಿತ ನಮಗಿಂತ ಮುಂಚೆ ಟ್ರಾಕ್ಟರ್ ನಲ್ಲಿ ನಮ್ಮ ಗ್ರಾಮಕ್ಕೆ ಹೋಗಿದ್ದ. ನಿ.ಪಿ-*13* ರಿಂದ *17* ರಲ್ಲಿ ಕಾಣುವ ಟ್ರಾಕ್ಟರ್ ಮತ್ತು ಟ್ರೇಲರ್ *1* ನೇ ಆರೋಪಿತನ ಹತ್ತಿರ ತುಂಬಾ ವರ್ಷಗಳಿಂದ ಇದೆ. ಆ ದಿನ ನಾನು *1* ನೇ ಆರೋಪಿತನನ್ನು ನೋಡಿದ್ದ ಬಗ್ಗೆ ಪೋಲೀಸರಿಗೆ ತಿಳಿಸಿರಲಿಲ್ಲ. ಪೋಲೀಸರಿಗೆ ನನ್ನ ಹೆಸರು

ಯಾರು ತಿಳಿಸಿದ್ದರು ಎಂದು ಗೊತ್ತಿಲ್ಲ. ಶಿವರಾಜಪ್ಪನ ಮಗ ಮತ್ತು ನಾನು ಸ್ನೇಹಿತರು ಎಂದರೆ ನಿಜ. ಚಾ.ಸಾ-*5* ವೃಷಬೇಂದ್ರ ನನ್ನ ದೊಡ್ಡಮ್ಮನ ಮಗನಿರುತ್ತಾನೆ. ಶಿವರಾಜಪ್ಪ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ವೃಷಬೇಂದ್ರನಿಗೆ ಸಹಾಯ ಮಾಡಿಲ್ಲ ಎಂದರೆ ನಿಜ. ಶಿವರಾಜಪ್ಪನ ಸಂಬಂಧಿಗಳು ಮತ್ತು ಸ್ನೇಹಿತರು ಆ ದಿನ ಅಹಲ್ಯಾ ಗ್ರಾಮದ ಕಡೆಗೆ ಹುಡುಕಾಡಿದ್ದನ್ನು ನೋಡಿಲ್ಲ. ಅಹಲ್ಯಾ ಗ್ರಾಮದಿಂದ ಗೌಡರಹುಂಡಿ ಗ್ರಾಮ *3* ಕಿ.ಮೀ ದೂರವಿದೆ. ನಾನು ಅಹಲ್ಯಾ ಗ್ರಾಮಕ್ಕೆ ಹೋಗಿಲ್ಲ ಮತ್ತು ಶರತ್ ಕುಮಾರ್ ನನ್ನು ನೋಡಿಲ್ಲ ಎಂದರೆ ಸರಿಯಲ್ಲ. ಶಿವರಾಜಪ್ಪನ ಮಕ್ಕಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು *3* ನೇ ಆರೋಪಿತರ ಪರ ಇಲ್ಲ**

***2* ನೇ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ**

*ಮರು ವಿಚಾರಣೆ:- ಇಲ್ಲ.*

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*